**ಸಾಕ್ಷಿಯನ್ನು ದಿಃ 03.03.2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 7 ರಿಂದ 12 ನೇ ಪ್ರತಿವಾದಿ ಪರ ಶ್ರೀ ಸಿ.ಎ.ಜಿ. ವಕೀಲರಿಂದಃ**

ನಾವು ಸರ್ವೇ ನಂ. 18/1 ರ ಆಸ್ತಿಯನ್ನು ಖರೀದಿ ಮಾಡಿರುತ್ತೇವೆ. ಅದು ದಾವ 2 ನೇ ಅನುಸೂಚಿ ಸ್ವತ್ತು ಇರುತ್ತದೆ. ಸದರಿ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಸ್ವತ್ತು ಯಾರ ಹೆಸರನಲ್ಲಿರುತ್ತದೆ ಎಂದು ಪರಿಶೀಲನೆ ಮಾಡಿರುತ್ತೇನೆ. ನಾವು ದಾವ 2 ನೇ ಅನುಸೂಚಿ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ಸದರಿ ಸ್ವತ್ತು ಕರೀಗೌಡ ರವರ ಮಗಳು ಚಿಕ್ಕತಿಮ್ಮಮ್ಮ ರವರ ಸ್ವಾಧೀನದಲ್ಲಿತ್ತು. ನಾವು ದಾವ 2 ನೇ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ವಾದಿಗಳಾಗಲೀ ಅಥವಾ ಪ್ರತಿವಾದಿ 1 ರಿಂದ 4 ರವರುಗಳು ಯಾವುದೇ ತಂಟೆ ತಕರಾರು ಮಾಡಿರುವುದಿಲ್ಲ. ದಾವ 2 ನೇ ಅನುಸೂಚಿ ಸ್ವತ್ತು ಪೂರ್ವದಲ್ಲಿ 8 ನೇ ಪ್ರತಿವಾದಿಯ ತಂದೆಗೆ ವಿಭಾಗದಲ್ಲಿ ಬಂದಿದ್ದು ನಂತರ 8 ನೇ ಪ್ರತಿವಾದಿ ಮತ್ತು ಸಹೋದರರ ನಡುವೆ ವಿಭಾಗವಾಗಿ 8 ನೇ ಪ್ರತಿವಾದಿಯ ಭಾಗ ಆತನ ಮಗಳಾದ ಚಿಕ್ಕ ತಿಮ್ಮಮ್ಮ ರವರಿಗೆ ಬಂದಿರುತ್ತದೆ ಎಂದರೆ ಸರಿ. ಆ ಕಾರಣಕ್ಕಾಗಿ ಯಾರು ಮಾರಾಟದ ಸಮಯದಲ್ಲಿ ತಂಟೆ ತಕರಾರು ಮಾಡಿಲ್ಲ ಎಂದರೆ ಸರಿ. ಆನಂತರ ದುರುದ್ದೇಶದಿಂದ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿ/ಸಿ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮೈಸೂರು.